ದಿನಾಂಕ : 05.10.2021 ಓ.ಎಸ್ ನಂ.04/2012 ರಲ್ಲಿ
ಡಿ.ಡಬ್ಲ್ಯೂ-1(ಅಶೋಕ್‌ಕುಮಾರ್ ಗಾಂಧಿ)

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ ಎ.ಎನ್.ಕೆ ವಕೀಲರಿಂದಃ

ಈ ವ್ಯವಹಾರದ ಬಾಬ್ತು ನಾನು ವಾದಿಯನ್ನು ಯಾವತ್ತೂ ಭೇಟಿಯಾಗಿಲ್ಲ ಎಂದರೆ ಸಾಕ್ಷಿಯು ಮೊದಲಿಗೆ ಹೌದು ಎಂದು ನುಡಿದು, ನಂತರ ಸುಳ್ಳು ಎಂದು ನುಡಿಯುತ್ತಾರೆ. ಈ ದಾವೆ ಹಾಕಿದ ನಂತರ ನಾನು ಅವರನ್ನು ಭೇಟಿಯಾಗಿದ್ದೆ. ಭೇಟಿಯಾದ ನಿಖರವಾದ ದಿನಾಂಕ ನನಗೆ ಜ್ಞಾಪಕವಿಲ್ಲ. ಯಾಕೆ ನನಗೆ ತೊಂದರೆ ಕೊಡುತ್ತೀರಾ ಎಂದು ಕೇಳಲು ಅವರನ್ನು ಭೇಟಿಯಾಗಿದ್ದೆ. ನಾನು ವಾದಿಯನ್ನು ಭೇಟಿಯಾದಾಗ ಈ ವ್ಯವಹಾರದ ಬಗ್ಗೆ ಚರ್ಚಿಸಿರಲಿಲ್ಲ ಎಂದರೆ ಚರ್ಚಿಸಿದ್ದೆ ಎಂದು ಸಾಕ್ಷಿಯು ನುಡಿಯುತ್ತಾರೆ. ಈ ವ್ಯವಹಾರದ ಬಗ್ಗೆ ನಾನು ವಾದಿಯನ್ನು ಭೇಟಿಯಾಗಿರಲಿಲ್ಲ ಎಂದರೆ ಸರಿಯಲ್ಲ.

ನಿಡಿ-1 ನ್ನು 1 ನೇ ಪ್ರತಿವಾದಿ ನಮ್ಮ ಮನೆಗೆ ಬಂದು ಕೊಟ್ಟಿದ್ದರು. ಆ ಮದುವೆಗೆ ನನಗೆ ಹೋಗಲಾಗಿರಲಿಲ್ಲ. ಮದುವೆಯನ್ನು ಸಾಧಾರಣವಾಗಿ ಖರ್ಚು ಮಾಡಿ ಮಾಡಿದ್ದರು ಎಂದರೆ ಸುಳ್ಳು ಎಂದು ಸಾಕ್ಷಿಯು ನುಡಿಯುತ್ತಾರೆ. ನನ್ನನ್ನು ಮದುವೆಗೆ ಕರೆದಿರಲಿಲ್ಲ ಎಂದರೆ ಸುಳ್ಳು ಎಂದು ಸಾಕ್ಷಿಯು ನುಡಿಯುತ್ತಾರೆ. ನಿಡಿ-1 ಕ್ಕೆ ಸಂಬಂಧಪಟ್ಟ ಮದುವೆಗೆ 1 ನೇ ಪ್ರತಿವಾದಿ ಖರ್ಚು ಮಾಡಿರಲಿಲ್ಲ ಹಾಗೂ ಹುಡುಗನ ಕಡೆಯವರು ಖರ್ಚು ಮಾಡಿದ್ದರು ಎಂದರೆ ಸುಳ್ಳು ಎಂದು ಸಾಕ್ಷಿಯು ನುಡಿಯುತ್ತಾರೆ. ಮದುವೆಗೆ ಯಾರು ಖರ್ಚು ಮಾಡಿದ್ದರು ಎಂದು ನಾನು ವಿಚಾರಣೆ ಮಾಡಿದ್ದೆ. ನಾನು ಈ ಬಗ್ಗೆ 1 ನೇ ಪ್ರತಿವಾದಿ ಮತ್ತು ಅವರ ಹೆಂಡತಿಯಲ್ಲಿ ವಿಚಾರಿಸಿದ್ದೆ. ಆ ಮದುವೆಯ ಬಗ್ಗೆ ನನಗೆ ಏನು

ಗೊತ್ತಿಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಡಿ-2 ರಿಂದ ನಿಡಿ-6 ಫೋಟೋಗಳು ಈ ದಾವಾ ಅನುಸೂಚಿಯ 2ನೇ ಸ್ವತ್ತಿಗೆ ಸಂಬಂಧಪಟ್ಟಿದೆ ಎಂದರೆ ಸರಿ. ದಾವಾ ಅನುಸೂಚಿಯ 2ನೇ ಸ್ವತ್ತಿನಲ್ಲಿರುವ ಮನೆ ಪಿತ್ರಾರ್ಜಿತ ಸ್ವತ್ತು ಎಂದರೆ ಸಾಕ್ಷಿಯು ದಾವಾ ಅನುಸೂಚಿಯ 2ನೇ ಸ್ವತ್ತು ಪಿತ್ರಾರ್ಜಿತ ಸ್ವತ್ತು, ಆದರೆ ಅದರಲ್ಲಿ ಕಟ್ಟಿರುವ ಮನೆ ಹೊಸ ಮನೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತಿನಲ್ಲಿ ಶೀಟ್ ಛಾವಣಿಯ ಮನೆ ಬಿಟ್ಟರೇ ಬೇರೆ ಯಾವುದೇ ಮನೆಯಿಲ್ಲ ಎಂದರೆ ಸರಿಯಲ್ಲ, ಸಾಕ್ಷಿಯು ಸ್ವತಃ ಗ್ರಾನೈಟ್‌ನಿಂದ ಪೂರ್ತಿ ಹೊಸದಾಗಿ ಕಟ್ಟಿದ ಮನೆ ಇದೆ ಎಂದು ನುಡಿಯುತ್ತಾರೆ. ದಾವಾ ಅನುಸೂಚಿಯ 2ನೇ ಸ್ವತ್ತಿನಲ್ಲಿ ಯಾವುದೇ ಹೊಸ ಮನೆ ಕಟ್ಟಿಲ್ಲ ಹಾಗೂ ಹಳೆ ಮನೆಯನ್ನೇ ನವೀಕರಿಸಿದ್ದಾರೆ ಎಂದರೆ ಸರಿಯಲ್ಲ. ಮನೆ ನವೀಕರಣಕ್ಕೆ ವಾದಿಯ ತಾತ ಬೋಗನಂಜಯ್ಯ ಖರ್ಚು ಮಾಡಿದ್ದರು ಎಂದರೆ ಸರಿಯಲ್ಲ.

ನಿಡಿ-7 ರಲ್ಲಿ ವಾದಿ ಮತ್ತು 1ನೇ ಪ್ರತಿವಾದಿಯ ಹೆಸರಿಲ್ಲ ಎಂದರೆ ಸಾಕ್ಷಿಯು ವಾದಿಯ ತಾತನ ಹೆಸರಿದ್ದು ಅವರ ಹೆಸರಿನಲ್ಲಿ ಆಸ್ತಿ ಇದೆ ಎಂದು ನುಡಿಯುತ್ತಾರೆ. ನಿಡಿ-7ನ್ನು ಹಾಜರು ಮಾಡಿದ ಉದ್ದೇಶ ಅವರಿಗೆ ಬೇರೆ ಆಸ್ತಿ ಇದೆ ಎಂದು ತೋರಿಸುವುದಕ್ಕಾಗಿರುತ್ತದೆ. ನಿಡಿ-7 ದಾವಾ ಅನುಸೂಚಿಯ 2ನೇ ಸ್ವತ್ತಿಗೆ ಸಂಬಂಧಪಟ್ಟಿದೆ ಎಂದರೆ ಸಾಕ್ಷಿಯು ಅದು ಬೇರೆ ಆಸ್ತಿ ಎಂದು ನುಡಿಯುತ್ತಾರೆ. ವಾದಿಗೆ ಕಲ್ಲುಗೋಪಹಳ್ಳಿಯಲ್ಲಿ ಒಂದೇ ಮನೆ ಇದೆ ಎಂದರೆ ಸರಿ, ಸಾಕ್ಷಿಯು ಸ್ವತಃ ಮತ್ತು ಸುಮಾರು ಇತರ ಆಸ್ತಿಗಳಿವೆ ಎಂದು ನುಡಿಯುತ್ತಾರೆ. ಕಲ್ಲುಗೋಪಹಳ್ಳಿಯಲ್ಲಿ ದಾವಾ ಅನುಸೂಚಿಯ 2ನೇ ಸ್ವತ್ತು ಬಿಟ್ಟರೇ

ದಿನಾಂಕ : 05.10.2021 ಓ.ಎಸ್ ನಂ.04/2012 ರಲ್ಲಿ
ಡಿ.ಡಬ್ಲ್ಯೂ-1(ಅಶೋಕ್‌ಕುಮಾರ್ ಗಾಂಧಿ)

ಬೇರೆ ಆಸ್ತಿ ಇಲ್ಲ ಎಂದರೆ ಸರಿಯಲ್ಲ. ನಿಡಿ-7 2012-13 ನೇ ಸಾಲಿನ ದಾಖಲೆ ಎಂದರೆ ಸರಿ. ನಿಡಿ-7 ರಿಂದ ನಿಡಿ-9 ದಾಖಲೆಗಳು ದಾವಾ ಅನುಸೂಚಿಯ 2 ನೇ ಸ್ವತ್ತಿಗೆ ಸಂಬಂಧಪಟ್ಟವು ಎಂದರೆ ಸರಿ, ಸಾಕ್ಷಿಯು ಮುಂದುವರೆದು ಅದಕ್ಕೂ ಹಾಗೂ ಇತರ ಸ್ವತ್ತುಗಳಿಗೆ ಸಂಬಂದಪಟ್ಟದ್ದು ಎಂದು ನುಡಿಯುತ್ತಾರೆ.

ನಿಡಿ-10 ರ ಪ್ರಕಾರ ಒಂದೂವರೆ ಗುಂಟೆ ಜಮೀನು ಎಂದರೆ ಸರಿ. ಸದರಿ ಸ್ವತ್ತನ್ನು ನಾನು ದಿನಾಂಕ 29.07.2016 ರಂದು ಖರೀದಿಸಿದ್ದೆ ಎಂದರೆ ಸರಿ. ನಿಡಿ-10 ರಲ್ಲಿ ಕಾಣಿಸಿದ ಸ್ವತ್ತನ್ನು ಬೆಂಗಳೂರು-ಮೈಸೂರು ಹೆದ್ದಾರಿ ಅಗಲೀಕರಣಕ್ಕೆ ಸ್ವಾಧೀನಪಡಿಸಿಕೊಂಡಿದ್ದಾರೆ ಎಂದರೆ ಆಗಿರಬಹುದು, ನನಗೆ ಗೊತ್ತಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ನಿಡಿ-10 2016-17 ಕ್ಕೆ ಸಂಬಂಧಪಟ್ಟ ದಾಖಲೆ ಎಂದರೆ ಸರಿ. ಸರ್ವೇ ನಂ.33/12 ಕ್ಕೆ ಸಂಬಂಧಪಟ್ಟ 2020-21 ನೇ ಸಾಲಿನ ಪಹಣಿಗಳನ್ನು ನಾನು ನೋಡಿಲ್ಲ. ಅದನ್ನು ಪರಿಶೀಲಿಸಿದರೆ ಪಹಣಿಯಲ್ಲಿ 1 ನೇ ಪ್ರತಿವಾದಿಯ ಹೆಸರು ಬರುತ್ತಿಲ್ಲ ಹಾಗೂ ಭೂಸ್ವಾಧೀನ ಎಂದು ಬರುತ್ತಿದೆ ಎಂದರೆ ನಾನು ಪರಿಶೀಲಿಸಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ.

ನಿಡಿ-11 ಮತ್ತು ನಿಡಿ-12 ರಲ್ಲಿ ಹೇಳಿದ ಆಸ್ತಿಗಳು ರಸ್ತೆ ಅಗಲೀಕರಣಕ್ಕೆ ಸ್ವಾಧೀನಗೊಂಡಿವೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-11 ರ ಪ್ರಕಾರ ಒಂದೂಕಾಲು ಗುಂಟೆ ಆಸ್ತಿ ಇದೆ ಎಂದರೆ ಸರಿ. ನಿಡಿ-12 ರ ಪ್ರಕಾರ ಒಂದೂವರೆ ಗುಂಟೆ ಜಮೀನು ಎಂದರೆ ಸರಿ. ನಿಡಿ-10 ರಿಂದ ನಿಡಿ-12 ರಲ್ಲಿ ಹೇಳಿದ ಆಸ್ತಿಗಳ ಬಗ್ಗೆ ವಾದಿ ಈ ದಾವೆ ಹಾಕುವ ಮೊದಲೇ ಸರ್ಕಾರ ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿತ್ತು ಎಂದರೆ ಸಾಕ್ಷಿಯು 2016 ರಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು ಎಂದು

ದಿನಾಂಕ : 05.10.2021 ಓ.ಎಸ್ ನಂ.04/2012 ರಲ್ಲಿ
ಡಿ.ಡಬ್ಲ್ಯೂ-1(ಅಶೋಕ್‌ಕುಮಾರ್ ಗಾಂಧಿ)

ನುಡಿಯುತ್ತಾರೆ. ನಿಡಿ-10 ರಿಂದ ನಿಡಿ-12 ರಲ್ಲಿ ಹೇಳಿದ ಆಸ್ತಿಗಳು ವಿಭಾಗಕ್ಕೆ ಸಿಗದ ಕಾರಣ ಅವುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 2012 ರಲ್ಲಿ ಅವರ ಹೆಸರಿನಲ್ಲೇ ಇತ್ತು ಎಂದು ನುಡಿಯುತ್ತಾರೆ.

ನಿಡಿ-13 ದಾಖಲೆಯನ್ನು ನಾನು 2015 ರಲ್ಲಿ ಪಡೆದುಕೊಂಡಿದ್ದೆ ಎಂದರೆ ಸಾಕ್ಷಿಯು 2016 ರಲ್ಲಿ ತೆಗೆದುಕೊಂಡದ್ದು ಎಂದು ನುಡಿಯುತ್ತಾರೆ. ನಾನು ಇತ್ತೀಚಿಗಿನ ಹಕ್ಕು ಬದಲಾವಣೆ ವಹಿಯನ್ನು ಹಾಜರು ಮಾಡಿಲ್ಲ ಎಂದರೆ ಸರಿ, ಹಾಜರು ಮಾಡಲು ತೊಂದರೆ ಇಲ್ಲ. ನಿಡಿ-14 ರಿಂದ ನಿಡಿ-17 ಫೋಟೋಗಳು ದಾವಾ ಅನುಸೂಚಿಯ 2 ನೇ ಸ್ವತ್ತಿಗೆ ಸಂಬಂಧಪಟ್ಟಿವೆ ಎಂದರೆ ಸರಿ.

ನನ್ನಿಂದ ಅಕ್ರಮ ಲಾಭ ಹೊಂದಲು ಈ ದಾವೆ ಹಾಕಿದ್ದಾರೆ ಎಂದು ನಾನು ಹೇಳಿದ್ದು ವಾದಿ ನನ್ನ ಬಳಿ ಬಂದು ಬೇಡಿಕೆ ಇಟ್ಟಿದ್ದರು. ಈ ದಾವೆ ಹಾಕುವ ಸ್ವಲ್ಪ ದಿನಗಳ ಮೊದಲು ವಾದಿ ಬೇಡಿಕೆ ಇಟ್ಟಿದ್ದರು. ನಾನು ವಾದಿಯ ಮನಗೆ ಹೋಗಿದ್ದಾಗ ಅವರು ಬೇಡಿಕ್ಕೆ ಇಟ್ಟಿದ್ದರು. ವಾದಿ ಯಾವತ್ತೂ ನನ್ನನ್ನು ಭೇಟಿ ಮಾಡಿಲ್ಲ ಹಾಗೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 24.03.1991 ರಂದು ಬಾಯಿಮಾತಿನ ಮೂಲಕ ಕೆಲವು ಆಸ್ತಿ ವಿಭಾಗವಾಗಿವೆ ಎಂದು ನಾನು ಹೇಳಿದ್ದು ಈ ವಿಚಾರವನ್ನು ನನಗೆ 1 ನೇ ಪ್ರತಿವಾದಿ ತಿಳಿಸಿದ್ದರು. ಈ ಬಗ್ಗೆ ನಾನು ದಾಖಲೆ ಪಡೆದುಕೊಂಡಿದ್ದೇನೆ. ದಿನಾಂಕ 15.04.2010 ರ ವಿಭಾಗಪತ್ರದಲ್ಲಿ ದಿನಾಂಕ 24.03.1991 ರ ವಿಭಾಗದ ಬಗ್ಗೆ ಹೇಳಿಲ್ಲ ಎಂದರೆ ಹೇಳಿದ್ದಾರೆ ಎಂದು

ಸಾಕ್ಷಿಯು ನುಡಿಯುತ್ತಾರೆ. ಒಂದೇ ಒಂದು ವಿಭಾಗಪತ್ರವಾಗಿದ್ದು ಅದು ದಿನಾಂಕ 15.04.2010 ರಂದು ಆಗಿತ್ತು ಎಂದರೆ ಸರಿಯಲ್ಲ. ಒಟ್ಟು ಕುಟುಂಬಕ್ಕೆ ಸೇರಿದ ಎರಡು ಆಸ್ತಿಗಳನ್ನು ಬಿಟ್ಟರೇ ಬೇರೆ ಆಸ್ತಿಗಳು ಇಲ್ಲದ ಕಾರಣ ವಾದಿ ಅವುಗಳನ್ನು ಮಾತ್ರ ಈ ದಾವೆಯಲ್ಲಿ ಸೇರಿಸಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಬೇರೆ ಸಾಕಷ್ಟು ಆಸ್ತಿಗಳಿವೆ ಹಾಗೂ ಅವುಗಳಿಗೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರು ಮಾಡಿದ್ದೇನೆ ಹಾಗೂ ಅರಣ್ಯ ಇಲಾಖೆಗೆ ಸೇರಿದ 10 ಎಕರೆ ಜಮೀನು ಬಿಡಿಸಿಕೊಳ್ಳಲು ಕರ್ನಾಟಕದ ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದಾರೆ ಎಂದು ನುಡಿಯುತ್ತಾರೆ. ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ದಾಖಲಾದ ಪ್ರಕರಣದಲ್ಲಿ ಈ ದಾವೆಯ ವಾದಿ ಮತ್ತು 1 ರಿಂದ 3 ನೇ ಪ್ರತಿವಾದಿಗಳು ಸದರಿ ಪ್ರಕರಣದಲ್ಲಿ ಪಕ್ಷಗಾರರಲ್ಲ. ಸದರಿ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳು ನನ್ನಲ್ಲಿ ಇಲ್ಲ. ಆ ಪ್ರಕರಣದ ಬಗ್ಗೆ ಮಾಹಿತಿ ನೀಡಲು ಪ್ರಯತ್ನ ಪಡುತ್ತೇನೆ. ವಾದಿಯ ಕುಟುಂಬಕ್ಕೆ ಸಂಬಂಧಪಟ್ಟ ಯಾವುದೇ ಪ್ರಕರಣ ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿಲ್ಲ ಹಾಗೂ ನಡೆಯುತ್ತಿಲ್ಲ ಎಂದರೆ ಸರಿಯಲ್ಲ.

ನಿಡಿ-1 ಮತ್ತು ನಿಡಿ-35 ಎರಡೂ ಒಂದೇ ದಾಖಲೆ ಎಂದರೆ ಸಾಕ್ಷಿಯು ಲಗ್ನಪತ್ರಿಕೆ ಹಿಂಭಾಗ ಮತ್ತು ಮುಂಭಾಗ ಎಂದು ನುಡಿಯುತ್ತಾರೆ. ನಿಡಿ-36 ಫೋಟೋಗಳು ಹಾಗೂ ನಿಡಿ-2 ರಿಂದ ನಿಡಿ-6 ಫೋಟೋಗಳು ಒಂದೇ ಆಸ್ತಿಗೆ ಸಂಬಂಧಪಟ್ಟವು ಎಂದರೆ ಸರಿ. ನಿಡಿ-37 ರಿಂದ ನಿಡಿ-39 ದಾಖಲೆಗಳು ಮತ್ತು ನಿಡಿ-7 ರಿಂದ ನಿಡಿ-9 ದಾಖಲೆಗಳು ಎಲ್ಲಾ ಒಂದೇ ಎಂದರೆ ಸರಿ. ನಿಡಿ-40 ರಿಂದ ನಿಡಿ-43 ದಾಖಲೆಗಳು

ದಿನಾಂಕ : 05.10.2021 ಓ.ಎಸ್ ನಂ.04/2012 ರಲ್ಲಿ
ಡಿ.ಡಬ್ಲ್ಯೂ-1(ಅಶೋಕ್‌ಕುಮಾರ್ ಗಾಂಧಿ)

ಮತ್ತು ನಿಡಿ-10 ರಿಂದ ನಿಡಿ-13 ದಾಖಲೆಗಳು ಒಂದೇ ಎಂದರೆ ಸರಿ. ನಿಡಿ-51 ಕ್ಕೆ ಸಂಬಂಧಪಟ್ಟ ಪಹಣಿ ಪತ್ರಿಕೆಯನ್ನು ನಾನು ನೋಡಿಲ್ಲ. ನಿಡಿ-51 ರಲ್ಲಿ ಹೇಳಿದ ಆಸ್ತಿ ಶಿವಲಿಂಗಯ್ಯ, ಮಹೇಶ, ಪ್ರೇಮ ಮತ್ತು ಲಕ್ಷ್ಮಮ್ಮನವರಿಗೆ ಸೇರಿದ ಆಸ್ತಿ ಎಂದರೆ ಸರಿ. ನಿಡಿ-51 ರಲ್ಲಿ ಹೇಳಿದ ಆಸ್ತಿಗೂ 1 ನೇ ಪ್ರತಿವಾದಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಇದೆ ಎಂದು ಸಾಕ್ಷಿಯು ನುಡಿಯುತ್ತಾರೆ. ನಿಡಿ-51 ರಲ್ಲಿ ಹೇಳಿದ ಆಸ್ತಿಯಪಹಣಿ ಇಂದಿಗೂ ಶಿವಲಿಂಗಯ್ಯ, ಮಹೇಶ, ಪ್ರೇಮ ಮತ್ತು ಲಕ್ಷ್ಮಮ್ಮನವರ ಹೆಸರಿನಲ್ಲಿದೆ ಎಂದರೆ ಸಾಕ್ಷಿಯು ನಾನು ನೋಡಿಲ್ಲ ಎಂದು ಹೇಳುತ್ತಾರೆ. ನಿಡಿ-51 ರಲ್ಲಿ ಹೇಳಿದ ಆಸ್ತಿ ವಾದಿಯ ಕುಟುಂಬಕ್ಕೆ ಸೇರಿದ ಆಸ್ತಿ ಅಲ್ಲ ಎಂದರೆ ನಿಜ, ಆದರೆ 1 ನೇ ಪ್ರತಿವಾದಿ ನನ್ನಿಂದ ಪಡೆದ ಹಣದಿಂದ ಆ ಆಸ್ತಿಯನ್ನು ವ್ಯವಹಾರದ ಉದ್ದೇಶಕ್ಕೆ ಜಿ.ಪಿ.ಎ ಮಾಡಿಸಿಕೊಂಡಿದ್ದರು ಎಂದು ನುಡಿಯುತ್ತಾರೆ. ನಿಡಿ-51 ನ್ನು ದಿನಾಂಕ 30.07.2007 ರಲ್ಲಿ ಮಾಡಲಾಗಿತ್ತು ಎಂದರೆ ಸರಿ. ನಿಡಿ-51 ಜಿ.ಪಿ.ಎ.ಯನ್ನು ರಾಮಮೂರ್ತಿ ಮತ್ತು ಚಿಕ್ಕಕರಡಪ್ಪನವರಿಗೆ ಕೊಡಲಾಗಿತ್ತು ಎಂದರೆ ಸರಿ. ಸದರಿ ಜಿ.ಪಿ.ಎ.ಯನ್ನು ತೆಗೆದುಕೊಳ್ಳುವ ಕಾಲಕ್ಕೆ 1 ನೇ ಪ್ರತಿವಾದಿ ನನ್ನ ಜೊತೆ ವ್ಯವಹಾರ ಮಾಡಿರಲಿಲ್ಲ ಎಂದರೆ ಅದಕ್ಕಿಂತ ಮೊದಲು ಆರೂವರೆ ತಿಂಗಳು ನನ್ನೊಂದಿಗೆ ವ್ಯವಹಾರ ಮಾಡಿದ್ದರು ಎಂದು ನುಡಿಯುತ್ತಾರೆ. ನಿಡಿ-51 ಸುಳ್ಳು ದಾಖಲೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

ದಿನಾಂಕ ಃ 05.10.2021 ಓ.ಎಸ್ ನಂ.04/2012 ರಲ್ಲಿ

ಡಿ.ಡಬ್ಲ್ಯೂ-1(ಅಶೋಕ್‌ಕುಮಾರ್ ಗಾಂಧಿ)

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಅನುಪಮ ಲಕ್ಷ್ಮಿ.ಬಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ರಾಮನಗರ.